**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ**

**ಸಿ ಸಿ ನಂ.28/2025**

| | | |
|---|---|---|
| ಹೆಸರು | ಹಾಲಸ್ವಾಮಿ | PW -3 |
| ತಂದೆಯ ಹೆಸರು | ಕೃಷ್ಣಮೂರ್ತಿ | CW -5 |
| ವಯಸ್ಸು | 31 ವರ್ಷ | |
| ಉದ್ಯೋಗ | ಖಾಸಗಿ ಉದ್ಯೋಗ | ದಿನಾಂಕಃ 22.09.2025 |
| ವಾಸ | ಗುತ್ತೂರು | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆ ಸಸಅ ರವರಿಂದ ಃ**

ಚಾಸಾ 1, 4, 6 ರಿಂದ 10 ರವರ ಪರಿಚಯ ಇದೆ. ಚಾಸಾ 2 ಮತ್ತು 3 ರವರ ಪರಿಚಯ ಇಲ್ಲ. ಆರೋಪಿಯ ಪರಿಚಯ ಇದೆ.

ದಿನಾಂಕ 01.03.2023 ರಂದು ಆರೋಪಿಯ ಮತ್ತು ಅವರ ಜೊತೆ ಇನ್ನೊಬ್ಬರು ಬಂದಿದ್ದರು. ಅವರನ್ನು ವಿಚಾರರಿಸಿದಾಗ ಆರೋಪಿಯ ಜೊತೆ ಬಂದ ವ್ಯಕ್ತಿ ಅವರ ಅಣ್ಣ ಎಂದು ಹೇಳಿದ್ದು, ಸರಿದಯವರ ಆಧಾರ ಗುತಿತಿನ ಚೀಟಿಯಲ್ಲಿ ಶಿವಮೊಗ್ಗದ ವಿಳಾಸ ಇತ್ತು. ಅವರ ಹೆಸರು ನನಗೆ ನೆನಪಿಲ್ಲ. ನಂತರ ಆರೋಪಿಯು ನನಗೆ ರೂ.4.00 ಲಕ್ಷ ಬಂಗಾರದ ಸಾಲ ಬೇಕಾಗಿದೆ ಎಂದು ಕೇಳಿದ್ದು, ಅವರ ಜೊತೆಯಲ್ಲಿ ಆರು ಬಂಗಾರದ ಬಳೆ ಮತ್ತು ಒಂದು ಉಂಗುರ ತೆಗೆದುಕೊಂಡು ಬಂದಿದ್ದರು. ಆಗ ನಾವು ರೂ.4.00 ಲಕ್ಷ ನಗದು ಹಣವನ್ನು ನಗದಾಗಿ ಕೊಡಲು ನಿಯಮ ಇಲ್ಲ, ರೂ.2.00 ಲಕ್ಷ ಹಣವನ್ನು ನಗದಾಗಿ ಮತ್ತು ಉಳಿದ ಹಣವನ್ನು ಬ್ಯಾಂಕ್ ಖಾತೆಗೆ ಜಮೆ ಮಾಡುತ್ತೇವೆ ಎಂದು ಹೇಳಿರುತ್ತೇವೆ. ನಂತರ ಆರೋಪಿಯು ರೂ.4.00 ಲಕ್ಷ ನಗದು ಹಣವೇ ಬೇಕಾಗಿದೆ ಎಂದು ವಿನಂತಿಸಿಕೊಂಡಿದ್ದು, ನಾವು ನಿಮಗೆ ಪರಿಚಯದ ಯಾರಾದರನ್ನೂ ಕರೆದುಕೊಂಡು ಬರುವಂತೆ ತಿಳಿಸಿದ್ದು, ಆಗ ಆರೋಪಿಯು ಬೇರೆ ಯಾರೂ ಇಲ್ಲ, ನಿವೇ ನಿಮಗೆ ಪರಿಚಯಸ್ಥರ ಹೆಸರಿನಲ್ಲಿ ಸಾಲವನ್ನು ಮಾಡಿಕೊಡಿ ಮಾರನೇ ದಿನ ನಾನು ಬಂದು ನಾನು ನನ್ನ ಹೆಸರಿಗೆ ಸಾಲದ ಖಾತೆಯನ್ನು ವರ್ಗಾವಣೆ ಮಾಡಿಸಿಕೊಳ್ಳುತ್ತೇನೆ ಎಂದು ಕೇಳಿದ್ದರಿಂದ ನಾನು ನನ್ನ ಸ್ನೇಹಿತನಾದ ಅಜಿತ್ ರವರವನ್ನು ಕರೆಸಿ, ಆರೋಪಿಯ ಹೆಸರಿಗೆ ರೂ.2.33 ಲಕ್ಷ ಸಾಲವನ್ನ ಮಂಜೂರು ಮಾಡಿ ಅದರಲ್ಲಿ ರೂ.1.99 ಲಕ್ಷ ಹಣವನ್ನು ನಗದು ರೂಪದಲ್ಲಿ ಕೊಟ್ಟು ಉಳಿದ ಹಣವನ್ನು ಅವರ ಖಾತೆಗೆ ಜಮೆ ಮಾಡಿರುತ್ತೇನೆ. ನಂತರ ಇನ್ನೊಂದು ಸಲಾದ ಖಾತೆಯನ್ನು ನನ್ನ ಸ್ನೇಹಿತನ ಹೆಸರಿನಲ್ಲಿ ಮಾಡಿ, ರೂ. 1.54 ಲಕ್ಷ ಹಣ ಸಾಲವನ್ನು ಮಂಜೂರು ಮಾಡಿ ಪೂರಾ ಹಣವನ್ನು ನಗದು ರೂಪದಲ್ಲಿ ಆರೋಪಿಗೆ ಕೊಟ್ಟಿರುತ್ತೇವೆ.

ನಂತರ ನಾವು ಆರೋಪಿಯು ನೀಡಿದ ಬಂಗಾರದ ಬಳೆಗಳನ್ನು ಮತ್ತು ಉಂಗುರವನ್ನು ಪರೀಕ್ಷೆ ಮಾಡಲು ಒಂದು ಕಲ್ಲಿನ ಮೇಲೆ ಉಜ್ಜಿ , ಅದರ ಮೇಲೆ ನೈಟ್ರಿಕ್ ಆಸಿಡ್, ಮತ್ತು ಉಪ್ಪು ನೀರನ್ನು ಹಾಕಿ ನೋಡಲಾಗಿ, ಆಗ ಸದರಿ ಆಭರಣಗಳು ಬಂಗಾರದ ಆಭರಣ ಎಂದು ಖಚಿತಪಸಿಕೊಂಡು ಅವುಗಳನ್ನು ನಮ್ಮ ವಶಕ್ಕೆ ಪಡೆದು ಖಾತೆ ನಂಬರ ಬರೆದು ಸೀಲ್ ಮಾಡಿ ನಮ್ಮ ಕಛೇರಿಯಲ್ಲಿರುವ ಲಾಕರ್ ನಲ್ಲಿ ಇಟ್ಟಿರುತ್ತೇವೆ. ನಂತರ ಮಾನೇ ದಿನ ನಾವು ಆರೋಪಿಗೆ ದೂರವಾಣಿ ಕರೆ ಮಾಡಿ ಅಜೀತ್ ನ ಹೆಸರಿನಲ್ಲಿರುವ ಸಾಲದ ಖಾತೆಯನ್ನು ತಮ್ಮ ಹೆಸರಿಗೆ ವರ್ಗಾಯಿಸಿಕೊಳ್ಳಲು ನಮ್ಮ ಕಛೇರಿಗೆ ಬರಲು ಕೇಳಿದ್ದು, ಆಗ ಆರೋಪಿಯು ಬರುತ್ತೇನೆ ಎಂದು ಹೇಳಿ ಸುಮಾರು 10 ದಿನ ಗಳ ಬರಲಿಲ್ಲ ನಂತರ ನಾವು ಮತ್ತೆ ಅವರಿಗೆ ಕಛೇರಿಗೆ ಬರಲು ಕರೆ

ಮಾಡಿದಾಗ ಆರೋಪಿಯು ದೂರವಾಣಿ ಕರೆಯನ್ನು ಸ್ವೀಕರಿಸಿರುವುದಿಲ್ಲ.

ನಂತರ ಅದೇ ತಿಂಗಳಿನಲ್ಲಿ ಮುಖ್ಯ ಕಛೇರಿಯಿಂದ ಆಡಿಟರ್ ನಮ್ಮ ಕಛೇರಿಗೆ ಬಂದಿದ್ದು, ಆಗ ಆರೋಪಿಯು ನೀಡಿದ ಬಳೆಗಳನ್ನು ಮತ್ತು ಉಂಗುರವನ್ನು ಪರೀಕ್ಷೆ ಮಾಡಿ ಆಡಿಟ್ ಮಾಡಿದ ಬಗ್ಗೆ ವರದಿಯನ್ನು ನೀಡಿದ್ದು, ಸದರಿ ಆಭರಣಗಳನ್ನು ಮತ್ತೆ ನಮ್ಮ ಕಛೇರಿಯ ಲಾಕರ್ ನಲ್ಲಿ ಇಡಲಾಗಿರುತ್ತದೆ. ನಂತರ ನಾನು ಅದೇ ತಿಂಗಳ ಕೊನೆ ದಿನದಂದು ನಾನು ಸದರಿ ಕಂಪನಿಯಲ್ಲಿ ಕೆಲಸವನ್ನು ಬಿಟ್ಟು ಬೇರೆ ಕಂಪನಿಗೆ ಕೆಲಸಕ್ಕೆ ಸೇರಿಕೊಂಡಿರುತ್ತೇನೆ. ನಂತರ ಆರೋಪಿಯು ಸದರಿ ಆಭರಣಗಳನ್ನು ಬಿಡಿಸಿಕೊಳ್ಳದೇ ಇದ್ದಾಗಿ ಅವು ಹರಾಜಿಗೆ ಬಂದಿದ್ದು, ಚಾಸಾ 4 ರವರು ಆರೋಪಿಯ ಸಾಲದ ಖಾತೆಯ ಬಗ್ಗೆ ವಿಚಾರಣೆ ಮುಂದುವರೆಸಿದಾಗ ನಾನು ಅಜಿತ್ ಹೆಸರಿನಲ್ಲಿರುವ ಸಾಲದ ಖಾತೆಯು ಆರೋಗೆ ಸಂಬಂಧಿಸಿದ್ದು ಹೇಳಿದ್ದು, ನಂತರ ಸದರಿ ಸಾಲವನ್ನು ಆರೋಪಿಯಿಂದ ಮರುಪಾವತಿ ಮಾಡಿಸಿಕೊಳ್ಳಲು ಆರೋಪಿಯು ಕೆಲಸ ಮಾಡುತ್ತಿದ್ದ ಅಂಗನವಾಡಿಗೆ ಹೋಗಿ ಕೇಳಿದಾಗ, ಅವರು ಬಿಡಿಸಿಕೊಳ್ಳುತ್ತೇನೆ ಎಂದು ಹೇಳಿದ್ದರಿಂದ ನಾವು ನೀಡಿದ ನೋಟಿಸಿಗೆ ಅವರ ಸಹಿಯನ್ನು ಪಡೆದು ವಾಪಸ್ ಬಂದಿರುತ್ತೇನೆ. ನಂತರ ಆರೋಪಿಯು ಸಾಲವನ್ನು ಮರುಪಾವತಿ ಮಾಡದೇ ಇದ್ದುದ್ದರಿಂದ ತಾನು ಅಡಮಾನ ಇಟ್ಟ ಆಭರಣಗಳನ್ನು ಬಿಡಿಸಿಕೊಳ್ಳದೇ ಇದ್ದಾಗ ಅವು ಹರಾಜು ಕ್ರಮಕ್ಕೆ ಹೋಗಿರುತ್ತವೆ. ಆಗ ಹರಾಜು ಕ್ರಮದಲ್ಲಿ ಭಾಗವಹಿಸಿದ ಬಿಡ್ಡರ್ಸ ಸದರಿ ಆಭರಣಗಳನ್ನು ಪರೀಕ್ಷಿಸಿದಾಗ ಅವು ನಕಲಿ ಬಂಗಾರ ಲೇಪನ ಮಾಡಿದ ಆಭರಣಗಳು ಎಂದು ಚಾಸಾ 4 ರವರಿಗೆ ತಿಳಿಸಿರುತ್ತಾರೆ. ನಂತರ ಚಾಸಾ 4 ರವರು ನನಗೆ ದೂರವಾಣಿ ಕರೆ ಮಾಡಿ ಸದರಿ ವಿಚಾರವನ್ನು ನನಗೆ ತಿಳಿಸಿರುತ್ತಾರೆ.

ನಂತರ ಜನೇವರಿ 2024 ರಲ್ಲಿ ಮತ್ತೇ ಚಾಸಾ 4 ಮತ್ತು ನಾನು ಮತ್ತೊಮ್ಮೆ ಆರೋಪಿಯು ಕೆಲಸ ಮಾಡುತ್ತಿದ್ದ ಅಂಗನವಾಡಿಗೆ ಹೋಗಿ ಅವರು ನೀಡಿದ ಆಭರಣಗಳು ನಕಲಿ ಎಂದು ಹರಾಜು ಪ್ರಕ್ರಿಯೆಯಲ್ಲಿ ತಿಳಿದು ಬಂದ ವಿಚಾರವನ್ನು ತಿಳಿಸಿದ್ದು, ಆರೋಪಿಯು ಆಭರಣಗಳನ್ನು ಬಿಡಿಸಿಕೊಳ್ಳಲು ಕಾಲಾವಕಾಶವನ್ನು ಕೇಳಿರುತ್ತಾರೆ. ಆರೋಪಿಯು ಬಾರದೇ ಇದ್ದುದ್ದರಿಂದ ಚಾಸಾ 4 ರವರು ಮಾರ್ಚ 2024 ರಲ್ಲಿ ಹರಿಹರ ನಗರ ಠಾಣೆಗೆ ಹೋಗಿ ದೂರು ಕೊಟ್ಟಿದ್ದು, ಆಗ ಪೊಲೀಸರು ಆರೋಪಿಯನ್ನು ಕರೆಯಿಸಿ ವಿಚಾರಣೆ ಮಾಡಿದಾಗ, ಆರೋಪಿಯು ಸದರಿ ಆಭರಣಗಳನ್ನು ಬಿಡಿಸಿಕೊಳ್ಳಲು ಮತ್ತೇ ಮೂರು ತಿಂಗಳ ಕಾಲಾವಕಾಶವನ್ನು ಕೇಳಿ ಮುಚ್ಚಳಿಕೆ ಬರೆದುಕೊಟ್ಟಿರುತ್ತಾರೆ. ಆಗಲೂ ಸಹ ಸಾಲವನ್ನು ಮರುಪಾವತಿ ಮಾಡದೇ ಇದ್ದುದ್ದರಿಂದ ಚಾಸಾ 1 ರವರು ಆರೋಪಿಯ ವಿರುದ್ಧ ದೂರನ್ನು ಸಲ್ಲಿಸಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಗಾಗಿ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.)

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಹರಿಹರ.

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ**

**ಸಿ ಸಿ ನಂ.28/2025**

| | | |
|---|---|---|
| ಹೆಸರು | ಸುಲೇಮಾನ್ | PW –4 |
| ತಂದೆಯ ಹೆಸರು | ದಾದಾಪೀರ್ | CW –3 |
| ವಯಸ್ಸು | 34 ವರ್ಷ | |
| ಉದ್ಯೋಗ | ಚಾಲಕ | ದಿನಾಂಕಃ 22.09.2025 |
| ವಾಸ | ದಾವಣಗೆರೆ | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆ ಸಸಅ ರವರಿಂದ ಃ**

ಚಾಸಾ 1 ರವರ ಪರಿಚಯ ಇಲ್ಲ. ಚಾಸಾ 2 ರವರ ಪರಿಚಯ ಇದೆ. ಸಾಕ್ಷಿಗೆ ಎರಡು ದಾಖಲೆಗಳನ್ನು ತೋರಿಸಲಾಗಿ ಅದು ಸ್ಥಳ ಪಂಚನಾಮೆ ಮತ್ತು ಕಚ್ಚಾ ನಕಾಶೆ ಆಗಿದ್ದು, ಸಾಕ್ಷಿಯ ಅದರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಈಗಾಗಲೇ ನಿಪಿ 2 ಮತ್ತು 3 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ 2(ಬಿ) ಮತ್ತು ನಿಪಿ 3(ಬಿ) ಎಂದು ಗುರುತಿಸಲಾಯಿತು. ಸುಮಾರು ಒಂದು ವರ್ಷದ ಹಿಂದೆ ಹರಿಹರದ ಪಿ ಬಿ ರಸ್ತೆಯಲ್ಲಿ ಇರುವ ಒಂದು ಬ್ಯಾಂಕಿನಲ್ಲಿ ಪೊಲೀಸರು ಆಭರಣಗಳನ್ನು ಅಕ್ಕಸಾಲಿಗರಿಂದ ಪರಿಕ್ಷೆ ಮಾಡಿ ಅವುಗಳು ನಕಲಿ ಬಂಗಾರ ಎಂದು ಹೇಳಿ ಅವುಗಳನ್ನು ತಮ್ಮ ವಶಕ್ಕೆ ಪಡೆದಾಗ ನಿಪಿ 2 ಮತ್ತು 3 ಕ್ಕೆ ನನ್ನ ಸಹಿಯನ್ನು ಪಡೆದಿರುತ್ತಾರೆ. ಸಾಕ್ಷಿಯು ನಿಪಿ 4 ಛಾಯಾಚಿತ್ರದಲ್ಲಿ ತಾನು ಇರುವುದನ್ನು ನೋಡಿ ಗುರುತಿಸೂತ್ತರೆ ಸಾಕ್ಷಿಯು ಮು ಮಾ 1 ಮತ್ತು 2 ನ್ನು ನೋಡಿ ಇವೇ ಪೊಲೀಸರು ವಪಶಡಿಸಿಕೊಂಡ ಆಭರಗಳು ಎಂದು ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ನಿಪಿ 2 ರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ನಾನು ಪಂಚನಾಮೆ ಸ್ಥಳದ ಅಕ್ಕಪಕ್ಕದ ನಿವಾಸಿ ಅಲ್ಲ ಎಂದರೆ ಸರಿ. ಪಂಚನಾಮೆ ಸ್ಥಳದ ಬ್ಯಾಂಕಿನ ಹೆಸರು ಮುತ್ತೂಟ್ ಫೈನಾನ್ಸ. ಪಂನಚಾಮೆಗೆ ಪೊಲೀಸರು ನನಗೆ ಯಾವುದೇ ನೋಟಿಸನ್ನು ನೀಡಿರುವುದಿಲ್ಲ. ಬಂಗಾರವನ್ನು ಯಾವ ರೀತಿ ಪರೀಕ್ಷೆ ಮಾಡಿದರು ಎಂದು ನನಗೆ ಗೊತ್ತಿಲ್ಲ. ಪೊಲೀಸರು ಪಂಚನಾಮೆ ಕಾಲಕ್ಕೆ ಒಟ್ಟು 6 ಬಳೆಗಳು ಮತ್ತು 1 ಉಂಗುರವನ್ನು ವಶಕ್ಕೆ ಪಡೆದಿರುತ್ತಾರೆ. ಸದರಿ ಅಭರಣಗಳನ್ನು ನನ್ನ ಸಮಕ್ಷಮ ತೂಕ ಮಾಡಿರುವುದಿಲ್ಲ. ನಿಪಿ 2 ನ್ನು ಜರುಗಿಸಿದ ದಿನಾಂಕ ತಿಂಗಳು ವರ್ಷ ನನಗೆ ಹೇಳಲು ಆಗುವುದಿಲ್ಲ. ನಿಪಿ 2 ಮತ್ತು 3 ಕ್ಕೆ ನಾನು ಪೊಲೀಸ್ ಠಾಣೆಯಲ್ಲಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ 2 ಮತ್ತು 3 ಕ್ಕೆ ಪೊಲೀಸರು ಸಹಿ ಮಾಡಲು ಹೇಳಿದ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಮು ಮಾ 1 ಮತ್ತು 2 ನ್ನು ಪೊಲೀಸರು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮು ಮಾ 1 ಮತ್ತು 2 ನ್ನು ಇದೇ ಮೊದಲಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ